**5-2-42 ರಾತ್ರಿ 9.55**

ಇಂದು ಭಾರತ ಬಿಂದುರಾಯರು ಊಟಕ್ಕೆ ಬಂದಿದ್ದರು. ಎಷ್ಟೊಂದು ಸುದ್ದಿ ಅವರಿಂದ ನನಗೆ ಗೊತ್ತಾಯ್ತು! ನನ್ನಲ್ಲಿ ಅವರಿಗೆ ವಿಶ್ವಾಸವೆಷ್ಟು!

ಇಂದು 4.30ಕ್ಕೆ ದೊಡ್ಡ ಮಳೆ. ಸುಮಾರು ಒಂದು ಗಂಟೆ ಆಯ್ತು. ನಮ್ಮ ಇಟ್ಟಿಗೆಗಳು ಬಹುಮಟ್ಟಿಗೆ ಕರಗಿರುವುವು. ಆದರೂ ಕೆಲಸವು ನಡೆವುದೆಂದು ಶ್ರೀ ಗೋಠೆಯವರು ಈಗ ಹೇಳಿದರು. ನಾಳೆ ಕೆಲಸವು ನಡೆಯಬಹುದೊ?

**7-2-42 ರಾತ್ರಿ 9.43**

ನಿನ್ನೆ ಬಲು ದಣಿವು. ಕಸಾರಿಕೆ. ಎದ್ದು ಕುಳ್ಳಿರಲಾಗದು.

ಮನೆಯ ಕೆಲಸವು ಯಾವ ಗತಿಯಿಂದ ಸಾಗಬೇಕು ಹಾಗೆ ಸಾಗಲಿಲ್ಲ. ಇಂದು ಗೋಠೆ ಕೇಶವರಾಯರಿಗೆ ಎಲ್ಲ ಪರಿಸ್ಥಿತಿಯನ್ನು ಸ್ಪಷ್ಟಗೊಳಿಸಲೇಬೇಕು.

**8-2-42 ರಾತ್ರಿ 9.56**

ಇಂದು ಮುಂಜಾವಿನ ಗಾಡಿಯಿಂದ ಗದುಗಿಗೆ ಹೋಗಿಬಂದೆನು. ಆನಂದನು ಹಣವನ್ನು ಕೊಡಲು ಒಪ್ಪಿ ತನ್ನ ಬಳಿಯಲ್ಲಿದ್ದ 140 ರೂ.ಗಳನ್ನು ಕೊಟ್ಟನು. ಅಕೃತ್ರಿಮವಾದ ಆತನ ಪ್ರೇಮವು ನನಗೆ ಎಂತಹ ಆನಂದವನ್ನು ಕೊಡುತ್ತಿದೆ! ಶ್ರೀಹರಿ, ಆನಂದನನ್ನೂ ಆತನ ಕುಟುಂಬದವರನ್ನೂ ಸುಖದಲ್ಲಿ ಇರಿಸು, ತಂದೆ!

ಪಾಂಡುರಂಗರಾಯರ ಪತ್ರ ಬಂದಿದೆ. 200 ರೂ.ಗಳ ಚೆಕ್ಕನ್ನು ಕಳಿಸಿದ್ದಾರೆ.

**10-2-42 ರಾತ್ರಿ 9.20**

ನಿನ್ನೆ ರಾತ್ರಿ ಬಹಳ ಹೊತ್ತು ಎಚ್ಚತ್ತು ಓದುತ್ತ ಕುಳಿತು ಬಲು ದಣಿದು ಮಲಗಿದೆನು.

ಇಂದು ಬೆಳಗಿನಲ್ಲಿ ಶ್ರೀ. ಗೋಠೆ ಕೇಶವರಾಯರು ಹಣಕ್ಕೋಸುಗ ಬಂದಾಗ ನಾನು ಈಗ ಒಂದು ಹೊತ್ತು ಊಟ ಮಾಡುತ್ತಲಿರುವುದನ್ನೂ ಮನೆ ಚೈತ್ರ ಶು|| ಪ್ರತಿಪದೆಯ ಒಳಗಾಗಿ ಸಿದ್ಧವಾಗದಿದ್ದರೆ ಅಂದಿನಿಂದ ಐದು ದಿನ ಉಪವಾಸ ಮಾಡುವೆನೆಂದೂ ತಿಳಿಸಿದೆನು. ಯುಗಾದಿಯ ದಿನ ನನ್ನ ದೇವರ ಪೂಜೆ ಹೊಸ ಮನೆಯಲ್ಲಿ ನೆರವೇರದಿದ್ದರೆ ನನಗೆ ಬಹು ಅಸಮಾಧಾನವಾಗುವುದೆಂದೂ ಉಪವಾಸವನ್ನೂ ಕೈಕೊಳ್ಳಬೇಕಾಗುವುದೆಂದೂ ಸ್ಪಷ್ಟವಾಗಿ ಅವರಿಗೆ ತಿಳಿಸಿದೆನು. ಮನೆಯನ್ನು ನಿಶ್ಚಯವಾಗಿ ಸಿದ್ಧ ಮಾಡಿ ಕೊಡುವುದಾಗಿ ಅವರು ವಚನವಿತ್ತರು.

**11-2-42ರಾತ್ರಿ 9.12**

ಇಂದು ಮತ್ತೆ ಮನೆಯ ಕಟ್ಟಡದ ಕೆಲಸವು ಮಂದವಾಗಿದೆ! ಗೋಠೆ ಕೇಶವರಾಯರು ಆಸ್ಥೆಯನ್ನು ವಹಿಸಲೊಲ್ಲರು. ನಾನು ಹೋದ ವಾರದಿಂದ ಒಂದು ಊಟದಿಂದ ಇರುತ್ತಿರುವೆನೆಂಬುದನ್ನು ಅವರಿಗೆ ನಾನು ತಿಳಿಸಿದರೂ ತಮ್ಮ ಅನಾಸ್ಥೆಯನ್ನು ಅವರು ಬಿಡಲೊಲ್ಲರು. ಕಟ್ಟಡದ ಕೆಲಸವು ನಿರ್ದಿಷ್ಟ ವೇಳೆಗೆ ಎಂದರೆ ಬರುವ ಚೈತ್ರ ಶುದ್ಧ ಪ್ರತಿಪದೆಯ ದಿವಸ ಮುಗಿವ ಲಕ್ಷಣವು ತೋರುವುದಿಲ್ಲ. ಅದಕ್ಕೋಸುಗ ಮನಸ್ಸಿಗೆ ವ್ಯಥೆ ಬಹಳ. ಇಂದು ರಾತ್ರಿ ನೀರ ಹೊರತು ಏನನ್ನೂ ತೆಗೆದುಕೊಳ್ಳಲಿಲ್ಲ. ಶ್ರೀಹರಿ, ಎಲ್ಲವೂ ಕುಶಲವಾಗಿ ಸಾಗುವಂತೆ ಮಾಡಯ್ಯ, ತಂದೆ!

**12-2-42 ರಾತ್ರಿ 8.45**

ಇಂದು ಬಹು ದುಃಖದ ವಾರ್ತೆ. ಶ್ರೀ.ಜಮನಾಲಾಲ ಬಜಾಜ ಅವರು ನಿನ್ನೆ ಸ್ವರ್ಗಸ್ಥರಾದರೆಂದು ಇಂದಿನ ಸಂಯುಕ್ತ ಕರ್ನಾಟಕದಲ್ಲಿ ಸುದ್ದಿ. ಶ್ರೀ. ಜಮನಾಲಾಲರು ಗಾಂಧಿಯವರ ನಿಃಸೀಮ ಭಕ್ತರು, ಸತ್ಯನಿಷ್ಠರು, ಉದಾರಚರಿತರು, ಪರಮಸ್ವಾರ್ಥತ್ಯಾಗಿಗಳು, ಪರಿಶುದ್ಧಹೃದಯರು, ತೀವ್ರಬುದ್ಧಿಗಳು, ಕಾರ್ಯ ಕ್ಷಮರು, ಋಜುವೃತ್ತಿಯವರು, ದೇಶವತ್ಸಲರು, ಮೃದುಸ್ವಭಾವದವರು, ಕರ್ತೃತ್ವಶಾಲಿಗಳು. ಅವರ ನಿಧನದಿಂದ ದೇಶವು ನಿಜವಾಗಿಯೂ ಬಡವಾಯ್ತು. ಶ್ರೀಹರಿ, ಅವರ ಮನೋಗತವನ್ನು ಬೇಗನೆ ಪೂರ್ಣಗೊಳಿಸು, ತಂದೆ. ಹಿಂದುಸ್ಥಾನಕ್ಕೆ, ಅವರ ಮಾತೃಭೂಮಿಗೆ ಸ್ವಾತಂತ್ರ್ಯವನ್ನು ಕ್ಷಿಪ್ರದಲ್ಲಿ ದಯೆಪಾಲಿಸು, ಪ್ರಭೋ!

**ಸಂತತವು ಹರಿಪದದ | ಚಿಂತನವು ದೊರೆವುದೆನ-**
**ಗೆಂತಯ್ಯ ಅದರಿದರ | ಚಿಂತೆಯಿದು ತಪ್ಪುವುದು?**
**ಅದರಿದರ ಚಿಂತೆ ಬೇ-**
**ಗುದಿಗೊಳಿಪ ಕಾಳ್ಕಿಚ್ಚು |**
**ಸದಮಲನ ಚಿಂತನವು**
**ಸೊದೆ ಬೆಂದ ಜೀವನವು ||** ●